# ಸಾಹಿತಿ ಎಂಬ ಸಾಕುಬೆಕ್ಕು

ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಗಳನ್ನು ಉಳಿಸಲು, ನಿರ್ವಹಿಸಲು ಹಲವಾರು ಅಕಾಡೆಮಿ, ಪ್ರಾಧಿಕಾರಗಳನ್ನು ಮಾಡಲಾಗಿದೆಯಷ್ಟೆ. ಅವುಗಳಿಗೆ ಸರ್ಕಾರ ನೇಮಿಸಿದ ಬಹುತೇಕ ಸಮಿತಿಗಳ ಅವಧಿ ಈಗಷ್ಟೆ ಮುಗಿದಿದೆ. ಇನ್ನುಮೇಲೆ ಈ ಸಂಸ್ಥೆಗಳಿಗೆ ನೇಮಕಗೊಳ್ಳಲು ಸಾಂಸ್ಕೃತಿಕ ಕ್ಷೇತ್ರದ ಗಣ್ಯರ ಚಟುವಟಿಕೆ ಬಿರುಸಾಗಲಿದೆ. ಈ ಸಂಸ್ಥೆಗಳು ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಅಂತಹ ಉಪಯುಕ್ತ ಕೆಲಸಗಳನ್ನು ಈವರೆಗೆ ಮಾಡಿವೆಯೇ ಎಂಬುದನ್ನು ಎಂದಿನಂತೆ ಕೇಳಿಕೊಳ್ಳಬೇಕಿದೆ. ಅವು ಪುಸ್ತಕಗಳನ್ನು ಪ್ರಕಟಿಸುವ, ಕಮ್ಮಟ, ವಿಚಾರ ಸಂಕಿರಣಗಳನ್ನು ನಡೆಸುವ, ಪ್ರಶಸ್ತಿ, ಬಹುಮಾನಗಳನ್ನು ಕೊಡುವ ಕೆಲಸ ಮಾಡಿಕೊಂಡು ಬರುತ್ತಿವೆ. ಇವನ್ನು ಬಿಟ್ಟರೆ ಅವಕ್ಕೆ ಬೇರೆ ಕೆಲಸವೂ ಇದ್ದಂತಿಲ್ಲ. ಇವು ಯಾವುದಕ್ಕೂ ಕಲೆಯನ್ನಾಗಲಿ, ಉತ್ತಮ ಸಾಹಿತ್ಯ ಕೃತಿಯನ್ನಾಗಲಿ, ಪ್ರತಿಭಾವಂತರನ್ನಾಗಲಿ ಸೃಷ್ಟಿಸಲು ಆಗದು. ಅವನ್ನು ಸಾಕಲು ಕೋಟ್ಯಂತರ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತಿದೆ. ಕರ್ನಾಟಕ ಮಾತ್ರವಲ್ಲ, ದೇಶದ ಎಲ್ಲೆಡೆ ಇದೇ ಸ್ಥಿತಿ ಇದೆ.

ಇನ್ನು ಈ ಸಂಸ್ಥೆಗಳ ಚುಕ್ಕಾಣಿ ಹಿಡಿಯಲು ಸಾಹಿತಿಗಳ ಹೆಸರಿನ ಪುಢಾರಿಗಳು ಮಾಡುವ ಲಾಬಿ, ಮಾಡುವ ಓಡಾಟ ಬಣ್ಣನೆಗೆ ನಿಲುಕದ್ದು. ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷದ ಅದೃಶ್ಯ ಕಾರ್ಯಕರ್ತರಿಗೆ, ಪ್ರಚಾರಕರಿಗೆ ಮಾತ್ರ ಅಂಥ ಸ್ಥಾನ ಸಿಗುತ್ತದೆ. ಇಲ್ಲ, ಅದಕ್ಕೆ ನೇಮಕವಾಗುವವರು ಆ ಪಕ್ಷದ ಘೋಷಿತ ತತ್ವ, ಸಿದ್ಧಾಂತಗಳಿಗೆ ಅನುಗುಣವಾಗಿರಬೇಕು. ಇಂಥ ಸಂಸ್ಥೆಗಳ ಮೂಲಕ ಸರ್ಕಾರವೂ ಈ ಬುದ್ಧಿಜೀವಿಗಳನ್ನು, ಸಾಹಿತಿಗಳನ್ನು ಒಂದು ರೀತಿಯಲ್ಲಿ ಪಳಗಿಸುವ, ಸಾಕುವ ಕೆಲಸ ಮಾಡುತ್ತಿರುತ್ತದೆ. ಅದರಿಂದ ಅದಕ್ಕೇ ಹೆಚ್ಚು ಲಾಭ. ಲೇಖಕರು ಅಕಾಡೆಮಿ ಒಂದರ ಅಧ್ಯಕ್ಷ ಇಲ್ಲವೇ ಸದಸ್ಯರಾದರೆ ಮೊದಲನೆಯದಾಗಿ ಅವರು ಕಳೆದುಕೊಳ್ಳುವುದು ಅವರನ್ನು ನೇಮಕ ಮಾಡಿದ ಸರ್ಕಾರದ ವಿರುದ್ಧ ಟೀಕಿಸುವ ನೈತಿಕ ಹಕ್ಕನ್ನು. ಕಟುವಾದ ವಿಮರ್ಶೆ, ಟೀಕೆಯನ್ನು ಯಾವ ರಾಜಕೀಯ ಜೀವಿಯೂ ಸಹಿಸುವುದಿಲ್ಲ. ಹಾಗಾಗಿ ಅವರು ಈ ಬುದ್ಧಿಜೀವಿ ಬೆಕ್ಕುಗಳ ತಲೆ ಸವರಿ ಅವುಗಳಿಗೆ ಹಾಲು, ತುಪ್ಪ ಹಾಕಿ ಜನರ ದುಡ್ಡಲ್ಲಿ ಸಾಕುತ್ತಿರುತ್ತಾರೆ. ಅಂಥ ಸಾಕುಬೆಕ್ಕುಗಳು ಯಾವ ಕಾಲಕ್ಕೂ 'ಮ್ಯಾಂವ್' ಎನ್ನುವುದು ಹೋಗಲಿ, ಇಲಿ ಹಿಡಿದು ದುಡಿದು ತಿನ್ನುವ ತಮ್ಮ ಮೂಲ ಸ್ವಭಾವವನ್ನೇ ಮರೆಯುತ್ತವೆ; ಬೆಚ್ಚಗೆ ಮಲಗಿ ನಿದ್ದೆ ಮಾಡುತ್ತಿರುತ್ತವೆ!

ಲಾಬಿ ಇಲ್ಲದೇ ಯಾವುದೇ ಅಕಾಡೆಮಿ, ಪ್ರಾಧಿಕಾರ, ವಿಶ್ವವಿದ್ಯಾಲಯದ ಹುದ್ದೆಗಳು ಪ್ರತಿಭೆ, ಸಾಧನೆ, ಕೆಲಸವನ್ನು ನೋಡಿ ಹುಡುಕಿ ಬರುವ ಕಾಲ ಹೋಗಿದೆ. ಕೆಲಕಾಲದ ಅಧಿಕಾರದ ಆಸೆಗಾಗಿ ತಮ್ಮ ಆತ್ಮಗೌರವವನ್ನು ಅಡವಿಟ್ಟು ಅಧಿಕಾರಸ್ಥರ ಮುಂದೆ ಅಂಗಲಾಚುವ ಮಂದಿ ಸಾಹಿತಿಗಳಂತೂ ಆಗಿರುವುದಿಲ್ಲ. ಕಲೆಯೆಡೆಗಿನ ಕಠೋರ ನಿಷ್ಠೆ ಉಳ್ಳವರು ಮಾತ್ರ ತಮ್ಮ ಒಳಗಿನ ದನಿಗಳಿಗೆ ಬದ್ಧರಾಗಿ ಅವುಗಳಿಂದ ದೂರವಿರುತ್ತಾರೆ. ಸರ್ಕಾರಿ ಸಂಸ್ಥೆಗಳ ಭಾಗವಾದವರು ಕಲೆ, ಸಂಸ್ಕೃತಿಯನ್ನು ಉಳಿಸುವ ಆತ್ಮವಂಚನೆಯ ಮಾತುಗಳನ್ನು ಆಡುವ ನಕಲಿಶಾಮರಾಗಿರುತ್ತಾರೆ.

**ಸಂದೀಪ ನಾಯಕ**

